# ಅನ್ವೇಷಣೆ

ಸ್ವಾಮಿ ರಾಘವೇಶಾನಂದ

ಅಥರ್ವವೇದದ ಪ್ರಶ್ನೋಪನಿಷತ್ತಿನಲ್ಲಿ ಬರುವ ಪ್ರಸಂಗವನ್ನು ಸರಳವಾದ ರೀತಿಯಲ್ಲಿ ತಿಳಿಸಿರುವ ಲೇಖಕರು ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದ ಅಧ್ಯಕ್ಷರಾಗಿದ್ದಾರೆ. ಭಾರತೀಯ ತತ್ತ್ವಚಿಂತನೆಯನ್ನು ಈ ಲೇಖನ ಪರಿಚಯಿಸುತ್ತದೆ.

ಅನ್ವೇಷಣೆಯು ಮನುಷ್ಯನ ಸ್ವಭಾವ. ಬಹಳ ಹಿಂದಿನಿಂದಲೂ ವಿಜ್ಞಾನಿಗಳು ಪ್ರಕೃತಿಯ ಅನ್ವೇಷಣೆಯನ್ನು ಮಾಡುತ್ತ ಅದರ ರಹಸ್ಯವನ್ನು ಹೊರಗೆಡಹುತ್ತಿದ್ದಾರೆ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ, 'ನಾವು ಯಾವುದೇ ವಸ್ತುವನ್ನು ಏಕಾಗ್ರ ಮನಸ್ಸಿನಿಂದ ಅನ್ವೇಷಣೆ ಮಾಡುತ್ತ ಹೋದಲ್ಲಿ ಅದು ತನ್ನೆಲ್ಲ ರಹಸ್ಯವನ್ನು ಬಿಟ್ಟುಕೊಡುತ್ತದೆ. ನಮ್ಮ ದೇಶದ ಪ್ರಾಚೀನ ಋಷಿಗಳು ಹೊರಗಣ ಪ್ರಕೃತಿಯ ಅನ್ವೇಷಣೆಗಿಂತ, ಈ ಪ್ರಕೃತಿಯ ಹಿಂದಿರುವ ಸೃಷ್ಟಿಕರ್ತನನ್ನು, ಹಾಗೂ ಮನುಷ್ಯನ ನಿಜಸ್ವರೂಪವನ್ನು ಅನ್ವೇಷಿಸಲು ತೊಡಗಿದರು. ಅದರ ಫಲವಾಗಿ ಈ ಜಗತ್ತಿನ ಸೃಷ್ಟಿಕರ್ತನೂ, ಈ ಜಗತ್ತು ಹಾಗೂ ತಾನು ಬೇರೆ ಬೇರೆ ಅಲ್ಲ ಎನ್ನುವ ಮಹತ್ವವಾದ ಜ್ಞಾನವನ್ನು ಪಡೆದರು. ಈ ಅನ್ವೇಷಣಾ ಕಾರ್ಯ ಹಲವು ಹಂತಗಳಲ್ಲಿ, ಹಲವು ರೂಪಗಳಲ್ಲಿ ನಡೆಯುತ್ತಿದ್ದವು."

ಒಮ್ಮೆ ಇಂತಹ ಅನ್ವೇಷಣೆಯಲ್ಲಿ ತೊಡಗಿದ್ದ ಆರು ವಿದ್ಯಾರ್ಥಿಗಳು ಒಟ್ಟಿಗೆ ಸೇರಿ, ಹಲವು ವಿಷಯಗಳನ್ನು ಚರ್ಚಿಸುತ್ತಿದ್ದಾಗ, ಅವರಲ್ಲಿ ಒಬ್ಬೊಬ್ಬನಿಗೂ ಕ್ಲಿಷ್ಟ ಸಮಸ್ಯೆಗಳು ಬಗೆಹರಿಯದೆ ಇರುವುದು ಅರ್ಥವಾಯಿತು. ಇದಕ್ಕೆ ಕಾರಣ, ಇವೆಲ್ಲ ಸಮಸ್ಯೆಗಳ ಪರಿಹಾರ, ಬ್ರಹ್ಮಜ್ಞಾನದಿಂದ ಮಾತ್ರ ಸಾಧ್ಯ. ಬ್ರಹ್ಮವಿದ್ಯೆ ಅತ್ಯಂತ ಸೂಕ್ಷ್ಮವಾದದ್ದು. ಗುರುವಿನ ಸಹಾಯವಿಲ್ಲದೆ ಯಾರೇ ಆದರೂ, ಎಷ್ಟು ಬುದ್ಧಿವಂತರೇ ಆದರೂ ಅದನ್ನು ಅರಿಯಲಾರರು. ಈ ಆರೂ ಜನರೂ ತಮ್ಮ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಒಬ್ಬ ಬ್ರಹ್ಮಜ್ಞಾನಿಯ ಸಹಾಯದ ಆವಶ್ಯಕತೆಯಿದೆ ಎಂಬುದನ್ನು ಅರಿತುಕೊಂಡು ಪಿಪ್ಪಲಾದ ಎಂಬ ಋಷಿಯ ಬಳಿಗೆ ಬಂದರು.

ಯಾರು ಈ ಆರು ಜನ ಸಾಧಕರು? ಭರದ್ವಾಜನ ಮಗನಾದ ಸುಕೇಶಾ, ಶಿವಿಯ ಮಗನಾದ ಸತ್ಯಕಾಮ, ಗರ್ಗ ಗೋತ್ರದ ಸೌರ್ಯಾಯಣಿ, ಕೋಸಲ ದೇಶದ ಆಶ್ವಲಾಯನ, ವಿದರ್ಭದೇಶದ ಭಾರ್ಗವ ಮತ್ತು ಕತ್ಯನ ಮರಿಮಗನಾದ ಕಬಂಧಿ. ಈ ಆರೂ ಜನರು ಸಾಮಾನ್ಯರಲ್ಲ ಎಂಬುದು ಅವರ ವಂಶದಿಂದಲೇ ತಿಳಿಯುತ್ತದೆ. ಇವರು ಬ್ರಹ್ಮಜ್ಞಾನವನ್ನು ಪಡೆಯಲು ಸರ್ವಸಂಗ ಪರಿತ್ಯಾಗಿಗಳಾಗಿ, ತೀವ್ರ ಸಾಧನೆಯಲ್ಲಿ ತೊಡಗಿದ್ದರು. ಉಪನಿಷತ್ತು ಅವರನ್ನು ಬ್ರಹ್ಮನಿಷ್ಠರು, ಬ್ರಹ್ಮಪರಾಯಣರು ಎಂದು ಹೇಳುತ್ತದೆ.

ಗುರುವಿನ ಬಳಿ ಹೋಗಬೇಕಾದರೆ, ವಿಧಿವತ್ತಾಗಿ ಗುರುದಕ್ಷಿಣೆಯೊಡನೆ ಸಮಿತ್ತಿನೊಡನೆ ಹೋಗಬೇಕು. ಗುರುಗಳು ತಮ್ಮ ಯಜ್ಞಯಾಗಾದಿಗಳಿಗಾಗಿ ಸಮಿತ್ತನ್ನು ಶಿಷ್ಯರಿಂದ ಬಯಸುತ್ತಿದ್ದರು. ಆರು ಜನ ಶಿಷ್ಯರೂ ಸಮಿತ್ತಿನೊಡನೆ ಗುರುವನ್ನು ಸಮೀಪಿಸಿ ಸಾಷ್ಟಾಂಗ ನಮಸ್ಕಾರ ಮಾಡಿದರು.

ಋಷಿ ಪಿಪ್ಪಲಾದರು ಈ ಆರು ಜನ ಶಿಷ್ಯರಿಗೆ ಸ್ವಾಧ್ಯಾಯ, ಬ್ರಹ್ಮಚರ್ಯಾದಿ ನಿಯಮಗಳನ್ನು ಅನುಸರಿಸಿಕೊಂಡು ಒಂದು ವರ್ಷ ಆಶ್ರಮದ ಸೇವಾಕಾರ್ಯದಲ್ಲಿ ತೊಡಗಿರಿ ಎಂದರು. ಪಿಪ್ಪಲಾದ ಮುನಿಗಳು ಬ್ರಹ್ಮಜ್ಞಾನಿಗಳಾಗಿದ್ದುದರಿಂದ ಅವರಲ್ಲಿ ನಮ್ರತೆಯಿತ್ತು. ಅವರು ಹೇಳಿದರು, "ನೀವು ಒಂದು ವರ್ಷದ ನಂತರ ನಿಮ್ಮ ಸಂದೇಹಗಳನ್ನು ತಿಳಿಸಿ. ನನಗೆ ಸಮರ್ಪಕ ಉತ್ತರ ಗೊತ್ತಿದ್ದರೆ, ಹೇಳುತ್ತೇನೆ." ಅವರು ಬ್ರಹ್ಮಜ್ಞಾನಿಗಳಾಗಿದ್ದರೂ ಅಹಂಕಾರಕ್ಕೆ ಎಡೆಗೊಡದೆ, ಗೊತ್ತಿದ್ದರೆ ತಿಳಿಸುತ್ತೇನೆ ಎಂದರು. ಇದು ಹಿರಿಯರ ನಮ್ರ ಗುಣ, ತಮಗೆ ತತ್ವವು ತಿಳಿದಿಲ್ಲ ಎಂದಲ್ಲ.

ಈ ಆರೂ ಜನರೂ ಗುರುಗಳ ಆದೇಶದ ಅನುಸಾರ ಅವರ ಶಿಷ್ಯರಾಗಿ, ಅವರ ಸೇವೆ ಮಾಡುತ್ತ ಒಂದು ವರ್ಷ ಕಾಲ ಆಶ್ರಮ ಜೀವನ ನಡೆಸಿ, ಮನಸ್ಸನ್ನು ಇನ್ನೂ ಹೆಚ್ಚು ಶುದ್ಧ ಮಾಡಿಕೊಂಡು ತಮ್ಮ ಪ್ರಶ್ನೆಗಳನ್ನು ಮುಂದಿಟ್ಟರು. ಕಬಂಧಿ ಕಾತ್ಯಾಯನನು ಗುರುವಿನ ಬಳಿ ಬಂದು ತನ್ನ ಸಂದೇಹವನ್ನು ವ್ಯಕ್ತಪಡಿಸಿದನು, "ಗುರುಗಳೇ, ಈ ಪ್ರಪಂಚದಲ್ಲಿರುವ ಜನರು ಎಲ್ಲಿಂದ ಹುಟ್ಟುತ್ತಾರೆ?" ಸೃಷ್ಟಿಯ ಕುರಿತಾದ ಈ ಪ್ರಶ್ನೆ ಅತ್ಯಂತ ಮುಖ್ಯವಾದುದು. ವ್ಯಾವಹಾರಿಕ ದೃಷ್ಟಿಯಿಂದ ದೊರೆಯಬಹುದಾದ ಉತ್ತರದಿಂದ ಇವನಿಗೆ ತೃಪ್ತಿಯಾಗಿರಲಿಲ್ಲ. ಆದುದರಿಂದಲೇ ಅವನು ಈ ಪ್ರಶ್ನೆಯನ್ನು ಹಾಕಿದ್ದ. ಸಾಧಾರಣವಾಗಿ ಈ ಪ್ರಶ್ನೆಯನ್ನು ಕೇಳಿದರೆ ನಮಗೆ ದೊರೆಯುವ ಉತ್ತರ, ಇದೆಂತಹ ಪ್ರಶ್ನೆ? ನಾನು ನಮ್ಮ ತಂದೆ ತಾಯಿಯಿಂದ ಹುಟ್ಟಿದ್ದೇನೆ, ಅವರು ತಮ್ಮ ತಂದೆತಾಯಿಯಿಂದ. ಜೀವನದಲ್ಲಿ ಒಂದು ಜೀವಕ್ಕೆ ಮತ್ತೊಂದು ಜೀವವನ್ನು ಸೃಷ್ಟಿ ಮಾಡುವ ಚೈತನ್ಯವಿದೆ. ಇದೇ ಜೀವಕ್ಕೂ ಜಡವಸ್ತುವಿಗೂ ಇರುವ ವ್ಯತ್ಯಾಸ. ಇನ್ನೊಂದು ಜೀವಿಯನ್ನು ಹುಟ್ಟಿಸುವ ಚೈತನ್ಯ ಏತಕ್ಕೆ ಇದೆ ಎಂದರೆ ಅದಕ್ಕೆ ಉತ್ತರ ಕೊಡಲಾಗುವುದಿಲ್ಲ. ದೇವರನ್ನು ನಂಬುವವನು, ದೇವರೇ

ಈ ಗುಣವನ್ನು ಜೀವಿಗೆ ಕೊಟ್ಟಿದ್ದಾನೆ ಎನ್ನುವನು. ದೇವರನ್ನು ನಂಬದವನು ಅದು ಪ್ರಕೃತಿಯ ಒಂದು ಧರ್ಮ. ಅದು ಅವರ ಜೊತೆಯಲ್ಲಿಯೇ ಇದೆ ಎನ್ನುವನು.

ಕಬಂಧಿಗೆ ಈ ಎರಡೂ ದೃಷ್ಟಿಗಳು ತೃಪ್ತಿಯನ್ನು ತರದಿರುವುದರಿಂದ ಸೃಷ್ಟಿಯ ರಹಸ್ಯವನ್ನು ಅರಿಯಲು ಈ ಪ್ರಶ್ನೆಯನ್ನು ಕೇಳಿದನು. ಅದಕ್ಕೆ ಪಿಪ್ಪಲಾದ ಗುರುವು ಅವನಿಗೆ ಹೇಳಿದರು, "ಪ್ರಜಾಪತಿಯು ಪ್ರಜೆಗಳನ್ನು ಸೃಷ್ಟಿಸುವ ಇಚ್ಛೆಯಿಂದ ತಪಸ್ಸು ಮಾಡಿದ." ಪ್ರಜಾಪತಿ ಎಂದರೆ ಯಾರು? ನಿರ್ಗುಣ, ನಿರಾಕಾರ ಬ್ರಹ್ಮನ, ಸಗುಣ ಸಾಕಾರ ರೂಪವೇ ಪ್ರಜಾಪತಿ. ಇದನ್ನೇ ವೇದಾಂತದಲ್ಲಿ ಹಿರಣ್ಯಗರ್ಭ, ಈಶ್ವರ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಇಂತಹ ಪ್ರಜಾಪತಿಯು ತಪಸ್ಸು ಮಾಡಿದನು. ತಪಸ್ಸು ಎಂದರೆ, 'ಒಂದು ಭಾವನೆ ಅಥವಾ ವಸ್ತುವನ್ನು ಕುರಿತು ದೀರ್ಘವಾಗಿ ಯೋಚಿಸುವುದು.' ಆ ತಪಸ್ಸಿನ ಫಲವಾಗಿ ಈಶ್ವರನು ಮೊದಲು ಎರಡು ವಸ್ತುಗಳನ್ನು ಸೃಷ್ಟಿಸಿದ. ಋಷಿಯು ಹೀಗೆ ಹೇಳಿದ, "ತಪಸ್ಸಿನ ಫಲವಾಗಿ ರಯಿ ಮತ್ತು ಪ್ರಾಣ ಎಂಬ ಜೋಡಿಯನ್ನು ಸೃಷ್ಟಿ ಮಾಡಿದ." ಇಲ್ಲಿ ರಯಿ ಎಂದರೆ ದ್ರವ್ಯ ಎಂದೂ ಪ್ರಾಣ ಎಂದರೆ ಜೀವ ಅಥವಾ ಚೈತನ್ಯಾಂಶ ಎಂದೂ ತಿಳಿಯಬೇಕು. ಇವೆರಡೂ ವಿಧವಿಧವಾಗಿ ಕಲೆತು ಕೋಟ್ಯಂತರ ಜೀವರಾಶಿಗಳಾಗಿವೆ.

ನಂತರ ಋಷಿ ಹೇಳುತ್ತಾನೆ: 'ಆದಿತ್ಯನೇ ಪ್ರಾಣ, ಚಂದ್ರನೇ ರಯಿ.' ಇಲ್ಲಿ ಸೂರ್ಯ ಮತ್ತು ಚಂದ್ರರನ್ನು ಜೀವ ಮತ್ತು ದ್ರವ್ಯಗಳ ಚಿಹ್ನೆಗಳೆಂದು ಹೇಳುತ್ತಾನೆ. ಸೂರ್ಯ ನಮಗೆ ಪ್ರಾಣಸ್ವರೂಪವಾಗಿರುವವನು. ಸೂರ್ಯ ಬರಿಯ ಬೆಳಕು ಮತ್ತು ಶಾಖವನ್ನು ಕೊಡುವವನು ಮಾತ್ರವಲ್ಲ. ಅವನು ಸರ್ವವ್ಯಾಪಿಯಾಗಿರುವ ಪರಮೇಶ್ವರನ ದ್ಯೋತಕ. ಸೃಷ್ಟಿಗೆ ಕಾರಣವಾದ ಹಿರಣ್ಯಗರ್ಭ ಅಥವಾ ಸಾಕಾರ ಬ್ರಹ್ಮನನ್ನು ಉಪಾಸಿಸಲು ಇಚ್ಛಿಸುವ ಸಾಧಕರಿಗೆ ಸೂರ್ಯನೇ ಇಷ್ಟದೇವತೆ. ಯಾರು ಬ್ರಹ್ಮಚರ್ಯ, ತಪಸ್ಸು ಮುಂತಾದ ನಿಷ್ಠೆಗಳಿಂದ ಆ ಪರಬ್ರಹ್ಮನೇ ಸೂರ್ಯನಲ್ಲಿ ಪ್ರಕಾಶಿತನಾಗಿರುವನೆಂದು ತಿಳಿದು ಉಪಾಸನೆ ಮಾಡುತ್ತಾರೊ ಅವರು ಪ್ರಪಂಚವನ್ನು ಬಿಟ್ಟುಹೋಗುವಾಗ ಉತ್ತರಾಯಣದ ಮೂಲಕ ಸೂರ್ಯ ಲೋಕಕ್ಕೆ ಹೋಗುತ್ತಾರೆ. ಇಲ್ಲಿ ಸೂರ್ಯಲೋಕ ಎಂದರೆ ಜ್ಞಾನದಿಂದ ಕೂಡಿರುವ ಲೋಕ. ಇದು ಭೌತಿಕವಾದುದಲ್ಲ, ಆಧ್ಯಾತ್ಮಿಕವಾದದ್ದು. ಇದನ್ನೇ ಮುಕ್ತಿ ಮಾರ್ಗ ಎಂದೂ ಹೇಳಬಹುದು. ಉಳಿದವರು ಯಾವ ಮಾರ್ಗದಿಂದ ಹೋಗುತ್ತಾರೆ? ಅವರು ದಕ್ಷಿಣಾಯನ ಮಾರ್ಗವಾಗಿ ಹೋಗುತ್ತಾರೆ. ಈ ಮಾರ್ಗದಲ್ಲಿ ಹೋಗುವವರಿಗೆ ಭೋಗಾಸಕ್ತಿ ಇನ್ನೂ ಇರುವುದರಿಂದ ಇವರು ಪಿತೃಲೋಕ, ಸ್ವರ್ಗಲೋಕ ಮುಂತಾದವುಗಳಿಗೆ ಹೋಗಿ ಪುಣ್ಯಕ್ಷಯವಾದ ಮೇಲೆ ಮತ್ತೆ ಮನುಷ್ಯ ಲೋಕಕ್ಕೆ ಬರುತ್ತಾರೆ. ಹೀಗೆ ಪಿಪ್ಪಲಾದನು ಪ್ರಜೆಗಳು ಹೇಗೆ ಹುಟ್ಟುತ್ತಾರೆ ಎಂಬ ಕಬಂಧಿಯ ಪ್ರಶ್ನೆಗೆ ಸಮಾಧಾನಕರವಾಗಿ ಉತ್ತರಕೊಟ್ಟನು.

ಅನಂತರ ಭಾರ್ಗವ ವೈದರ್ಭಿಯು ಅತ್ಯಂತ ವಿನಯದಿಂದ ತನ್ನ ಸಂದೇಹವನ್ನು ಮುಂದಿಟ್ಟ, "ಭಗವನ್, ಎಷ್ಟು ದೇವತೆಗಳು ದೇಹವನ್ನು ಧರಿಸಿಕೊಂಡಿರುತ್ತಾರೆ? ಇವರಲ್ಲಿ ಶ್ರೇಷ್ಠರು ಯಾರು?" ಇವನು ಕೇಳಿದ ಪ್ರಶ್ನೆಗೆ ಸ್ವಲ್ಪ ವಿವರಣೆ ಬೇಕು. ಮೊದಲನೆಯ ಪ್ರಶ್ನೆ ಸೃಷ್ಟಿಗೆ ಸಂಬಂಧಿಸಿತ್ತು. ಗುರುವಿನ ಉತ್ತರದಿಂದ ಪರಬ್ರಹ್ಮನು ಈ ಜಗತ್ತನ್ನು ಸೃಷ್ಟಿಸಿದನು, ಈ ಪ್ರಪಂಚದಲ್ಲಿ ಗೋಚರಿಸುವುದನ್ನೆಲ್ಲ ಪರಬ್ರಹ್ಮನ ಪ್ರತೀಕವೆಂದೆ ಪರಿಗಣಿಸಬೇಕು, ಉಪಾಸಕನಿಗೆ ಪ್ರತಿಯೊಂದೂ ಆರಾಧ್ಯ ಎಂದು ತಿಳಿದಂತಾಯಿತು. ಈಗ ವೈದರ್ಭಿಯ ಪ್ರಶ್ನೆಯೇನೆಂದರೆ "ಹಾಗಾದರೆ ಪ್ರಪಂಚದಲ್ಲಿ ಎಷ್ಟು ರೂಪಗಳು ಪ್ರಕಾಶಿತವಾಗಿವೆಯೋ, ಅಷ್ಟೂ ದೇವತೆಗಳಿವೆಯೆಂದ ಹಾಗಾಯಿತು. ಆದ್ದರಿಂದ ಎಷ್ಟು ಜನ ದೇವತೆಗಳಿದ್ದಾರೆ? ಎಷ್ಟು ದೇವತೆಗಳು ಮಾನವ ಶರೀರದಲ್ಲಿದ್ದಾರೆ? ಶರೀರದಲ್ಲಿರುವ ದೇವತೆಗಳಲ್ಲಿ ಪ್ರಮುಖನಾದವನು ಯಾರು? ಯಾರಿಗೆ ಅಗ್ರಪೂಜೆ ಸಲ್ಲಬೇಕು?"

ಪಿಪ್ಪಲಾದನು ಬ್ರಹ್ಮಜ್ಞಾನಿಯಾಗಿದ್ದುದರಿಂದ ತಾಳ್ಮೆಯಿಂದ ಶಿಷ್ಯರಿಗೆ ಅರ್ಥವಾಗುವ ರೀತಿಯಲ್ಲಿ, ಸಮಾಧಾನದಿಂದ ಉತ್ತರಿಸಿದನು. ಇದು ಉಪಾಸನೆಗೆ ಸಂಬಂಧಪಟ್ಟ ಪ್ರಶ್ನೆಯಾಗಿರುತ್ತದೆ. ಉಪಾಸನೆಯು ಜ್ಞಾನಕ್ಕೆ ಪ್ರಥಮ ಸೋಪಾನ. ತನಗೆ ಯಾವ ಹಂತ ಅನುಕೂಲವಾಗಿ ಕಂಡುಬರುತ್ತದೆಯೋ ಆ ಹಂತದಿಂದ ಉಪಾಸಕನು ಆರಂಭಿಸಿ, ಯಾವುದನ್ನು ಆರಾಧಿಸುತ್ತಾನೋ ಅದನ್ನೇ ಸರ್ವೋತ್ತಮವಾದುದೆಂದು ಭಾವಿಸಿ, ಶ್ರದ್ಧೆಯಿಂದ ಮುಂದುವರಿಯಬೇಕು.

ದೇಹ ಎಂದರೇನು? ಋಷಿ ಹೇಳುತ್ತಾರೆ, "ಈ ದೇಹವು ಆಕಾಶ, ವಾಯು, ಅಗ್ನಿ, ನೀರು ಹಾಗೂ ಭೂಮಿ—ಈ ಪಂಚಭೂತಗಳಿಂದ ಆಗಿದೆ. ಈ ಐದು ವಸ್ತುಗಳು ನಮ್ಮ ದೇಹದಲ್ಲಿವೆ. ನಮ್ಮ ಶರೀರದ ಕಿಟಕಿಗಳಂತಿರುವ ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮಗಳೆಂಬ ಜ್ಞಾನೇಂದ್ರಿಯಗಳಿಂದ ನಮಗೆ ಹೊರಗಿನ ಸುದ್ದಿ ಸಮಾಚಾರಗಳೆಲ್ಲ ಗೊತ್ತಾಗುವುದು. ಬಾಗಿಲಿನಂತಿರುವ ಕರ್ಮೇಂದ್ರಿಯಗಳ ಮೂಲಕ ಮನುಷ್ಯ ಕೆಲಸ ಮಾಡಲು ಹೊರಗೆ ಹೋಗಿ ಬಂದಂತೆ ಮಾಡುತ್ತಾನೆ. ಈ ಎಲ್ಲ ಇಂದ್ರಿಯಗಳನ್ನು ದೇವತೆಗಳು ಎಂದು ಕರೆಯುತ್ತಾರೆ. ಆದರೆ ಈ ಎಲ್ಲ ದೇವತೆ

ಗಳಿಗೂ ಜೀವ ಕೊಡುವುದು ಚೈತನ್ಯ. ಈ ಚೈತನ್ಯದ ಸಹಾಯವಿಲ್ಲದೆ ಯಾವುದೂ, ಯಾವ ಕಾರ್ಯವನ್ನೂ ಮಾಡಲು ಸಾಧ್ಯವಿಲ್ಲ. ಒಮ್ಮೆ ಇಂದ್ರಿಯಗಳಲ್ಲಿ ತಮ್ಮಲ್ಲಿ ಯಾರು ದೊಡ್ಡವರು ಎಂಬ ವಿವಾದ ಬಂದಿತು. ಪ್ರತಿಯೊಂದು ಇಂದ್ರಿಯವೂ ತಾನೇ ಮುಖ್ಯವೆಂದು ವಾದಿಸಲಾರಂಭಿಸಿತು. ಆಗ ಪ್ರಾಣವು ಹೇಳಿತು, 'ನೀವೆಲ್ಲ ನಿಮ್ಮ ಮೋಹವನ್ನು ಬಿಡಿ. ನೀವೆಲ್ಲ ಬರೀ ನಿಮಿತ್ತ. ನಿಮ್ಮಿಂದ ಅಲ್ಲ ಕೆಲಸ ಆಗುತ್ತಿರುವುದು. ನಾನೇ ಪಂಚಪ್ರಾಣವಾಗಿ ದೇಹದ ಮೂಲಕ ಹೊರಗೆ ಕಾಣುವ ಕೆಲಸಗಳಲ್ಲಿ ಮತ್ತು ದೇಹದೊಳಗೆ ಕಣ್ಣಿಗೆ ಕಾಣಿಸದೆ ಇದ್ದರೂ, ಅತ್ಯಂತ ಮುಖ್ಯವಾದ ಹೃದಯ ಚಲನೆ, ಜೀರ್ಣಿಸುವ ಶಕ್ತಿ ಮುಂತಾದ ಕ್ರಿಯೆಗಳಲ್ಲಿ ಮಗ್ನನಾಗಿರುವವನು' ಎಂದು ಹೇಳಿತು. ಆದರೂ ಇಂದ್ರಿಯಗಳು ಅದನ್ನು ನಂಬಲಿಲ್ಲ. ಒಂದೊಂದು ಇಂದ್ರಿಯವೂ ತನ್ನಿಂದಲೇ ಕೆಲಸ ಆಗುತ್ತಿದೆ ಎಂದು ಭಾವಿಸಿತು. ಆಗ' ಮುಖ್ಯಪ್ರಾಣವು ಇಂದ್ರಿಯಗಳಿಗೆಲ್ಲ ಬುದ್ಧಿಯನ್ನು ಕಲಿಸಲು ತೀರ್ಮಾನಿಸಿತು. ಯಾವಾಗ ಅದು ದೇಹವನ್ನು ಬಿಟ್ಟು ಹೊರಗೆ ಹೋಗಲು ಎದ್ದು ನಿಂತಿತೊ, ಆಗ ಉಳಿದವು ತಮ್ಮಗಳ ಇಚ್ಛೆಯಿಲ್ಲದೆ ಪ್ರಾಣವನ್ನು ಅನುಸರಿಸಿ ತಾವೂ ಹೊರಟು ನಿಂತವು. ಪ್ರಾಣ ಮತ್ತೆ ಕುಳಿತೊಡನೆ ಅವುಗಳೂ ಉಳಿದವು. ಆಗ ಅವುಗಳಿಗೆ ಅರ್ಥವಾಯಿತು. ಮುಖ್ಯಪ್ರಾಣನೇ ನಮ್ಮ ಒಡೆಯ ಎಂದು. ಪ್ರಾಣವಿದ್ದಲ್ಲಿ ಮಾತ್ರ ಇತರ ಇಂದ್ರಿಯಗಳು ಕೆಲಸ ಮಾಡಲು ಸಾಧ್ಯವೆಂದೂ, ಅದಿಲ್ಲದಿದ್ದರೆ ತಮ್ಮಲ್ಲಿ ಯಾರೂ ಬದುಕಲು ಸಾಧ್ಯವಾಗುವುದಿಲ್ಲವೆಂದೂ ತಿಳಿದವು. ಆಗ ಇತರ ಇಂದ್ರಿಯಗಳು ಪ್ರಾಣ ವಾಯುವನ್ನು ಕುರಿತು "ನೀನೇ ಅಗ್ನಿಯಾಗಿ ಶಾಖೋತ್ಪತ್ತಿ ಮಾಡುವವನು, ನೀನೇ ಆದಿತ್ಯದಂತೆ ಪ್ರಕಾಶಗೊಳ್ಳುವವನು. ಇಂದ್ರನಂತೆಯೂ, ಭೂಮಿಯಂತೆಯೂ, ಚಂದ್ರನಂತೆಯೂ ನಮಗೆ ರಕ್ಷಣೆ ನೀಡುವವನು, ಸರ್ವವೂ ನೀನೆ" ಎಂದು ಪ್ರಾರ್ಥಿಸಿದವು.

ಅನಂತರ ಆಶ್ವಲಾಯನ ಕೌಸಲ್ಯನು ಕೇಳಿದ: "ಪೂಜ್ಯರೆ, ಈ ಪ್ರಾಣವಾಯು ಎಲ್ಲಿಂದ ಉತ್ಪತ್ತಿಯಾಗಿ, ಶರೀರವನ್ನು ಹೇಗೆ ಪ್ರವೇಶಿಸುತ್ತದೆ? ಅನಂತರ ಅದು ಹೇಗೆ ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ ಎಂಬುದಾಗಿ ಐದು ಭಾಗಗಳಾಗುತ್ತದೆ? ದೇಹದಿಂದ ಹೊರಬಂದ ಮೇಲೆ ಅದೆಲ್ಲಿಗೆ ಹೋಗುತ್ತದೆ? ಈ ಪ್ರಾಣವು ಹೊರಗಿನ ಜಗತ್ತಿನಲ್ಲಿಯೂ ಇದೆಯೇ? ಒಳಗಿನ ದೇಹದಲ್ಲಿಯೂ ಇದು ಇದೆ ಎಂದರೆ ಇವೆರಡರ ವ್ಯತ್ಯಾಸವೇನು?" ಪಿಪ್ಪಲಾದನು ಇವನ ಪ್ರಶ್ನೆಗಳಿಂದ ಅತಿ ಸಂತೋಷಗೊಂಡು ಹೇಳಿದ: "ನೀನು ಅನೇಕ ಪ್ರಶ್ನೆಗಳನ್ನು ಕೇಳುತ್ತಿರುವೆ. ಅತಿ ಸೂಕ್ಷ್ಮವಾದ ಪ್ರಾಣದ ಬಗ್ಗೆ ನಾನು ಹೇಳಿದುದನ್ನೆಲ್ಲ ಗಂಭೀರವಾಗಿ ಆಲೋಚಿಸಿ ಇನ್ನೂ ಸೂಕ್ಷ್ಮವಾದ ಪ್ರಶ್ನೆಗಳನ್ನು ಕೇಳಿದ್ದೀಯೆ. ನೀನು ಬ್ರಹ್ಮನಿಷ್ಠನಾಗಿ ಜ್ಞಾನಾಕಾಂಕ್ಷಿಯಾಗಿ ಈ ಪ್ರಶ್ನೆಗಳನ್ನು ಕೇಳುತ್ತಿರುವುದರಿಂದ ಪ್ರಾಣದ ಆದ್ಯಂತಗಳನ್ನು ವಿವರಿಸುತ್ತೇನೆ. ಗಮನವಿಟ್ಟು ಕೇಳು. ಈ ಪ್ರಾಣವು ಬ್ರಹ್ಮನಿಂದ ಹುಟ್ಟಿದೆ. ಆ ಪರಬ್ರಹ್ಮನೊಡನೆ ಹೋಲಿಸಿ ನೋಡಿದ್ದೇ ಆದರೆ ಈ ಪ್ರಾಣವು ಕೇವಲ ಛಾಯೆ. ಮತ್ತೇನೂ ಅಲ್ಲ. ಇದು ಮನುಷ್ಯನ ಕರ್ಮಸಂಕಲ್ಪಗಳನ್ನು ಅವಲಂಬಿಸಿಕೊಂಡು ದೈಹಿಕ ಶರೀರವನ್ನು ಹೋಗುತ್ತದೆ. ಮನುಷ್ಯನ ಹೃದಯ ಇದರ ನಿವಾಸಸ್ಥಾನ. ಈ ಮುಖ್ಯಪ್ರಾಣವೇ ತನ್ನನ್ನು ಐದು ಪ್ರಾಣಗಳಾಗಿ ವಿಭಜಿಸಿಕೊಂಡು, ಹೇಗೆ ರಾಜನು, 'ಈ ಗ್ರಾಮಗಳನ್ನು ಆಳು, ಆ ಗ್ರಾಮಗಳನ್ನು ಆಳು' ಎಂದು ಅಧಿಕಾರಿಗಳನ್ನು ನಿಯೋಜಿಸುತ್ತಾನೆಯೋ ಹಾಗೆ ತನ್ನದೇ ಆದ ಉಳಿದ ಐದು ಪ್ರಾಣಗಳನ್ನು ಬೇರೆ ಬೇರೆ ಕಾರ್ಯಗಳಲ್ಲಿ ನಿಯೋಜಿಸುತ್ತದೆ."

ಕಟ್ಟಕಡೆಯದಾಗಿ ಪ್ರಳಯಕಾಲದಲ್ಲಿ ದುಷ್ಕರ್ಮಿಗಳು ಮತ್ತು ಸತ್ಕರ್ಮಿಗಳು ತಂತಮ್ಮ ಕರ್ಮಗಳಿಗೆ ಅನುಸಾರವಾಗಿ ಫಲಗಳನ್ನು ಅನುಭವಿಸುವಂತೆ ಪ್ರಾಣಶಕ್ತಿಯು ಮಾಡುತ್ತದೆ. ಆದ್ದರಿಂದ ಜೀವನು ಪ್ರಾಣವನ್ನು ಬ್ರಹ್ಮನ ಛಾಯೆ ಎಂದರಿತು ಪ್ರಾಣೋಪಾಸನೆಯ ಮೂಲಕ ಬ್ರಹ್ಮನನ್ನು ಉಪಾಸಿಸಬೇಕು. ಅಂತಹ ಸಾಧಕನು ಬ್ರಹ್ಮನಲ್ಲಿಯೇ ಸತತವೂ ನೆಲೆಸುತ್ತಾನೆ. ಆಶ್ವಲಾಯನ ಕೌಸಲ್ಯನು ಬ್ರಹ್ಮಜ್ಞಾನಕ್ಕೆ ತಕ್ಕ ಅಭ್ಯರ್ಥಿಯಾಗಿದ್ದುದರಿಂದ ಈ ಉಪದೇಶವು ಅವನಿಗೆ ತುಂಬ ಸಂತೋಷವನ್ನುಂಟುಮಾಡಿತು.

ಆರುಜನ ಶಿಷ್ಯರಲ್ಲಿ ಮೂವರ ಸಂದೇಹ ತೀರಿತು. ಇಲ್ಲಿಯವರೆಗೆ ಜಿಜ್ಞಾಸೆ ಮಾಡಿದ ವಿಷಯಗಳು ಬ್ರಹ್ಮನಿಗೆ ಸಂಬಂಧಪಟ್ಟ ವಿಷಯಗಳೇ ಆಗಿದ್ದರೂ ಅದು ನೇರವಾಗಿ ಚರ್ಚಿಸಲ್ಪಡದೆ ಪರೋಕ್ಷವಾಗಿ ಬ್ರಹ್ಮನಿಗೆ ಸಂಬಂಧಪಟ್ಟಿದ್ದರಿಂದ ಅವೆಲ್ಲ ಅಪರಾ ವಿದ್ಯೆ. ಇದು ಜ್ಞಾನದ ಒಂದು ಚಿಪ್ಪಿನಂತೆ. ಉಳಿದ ಮೂವರು ಶಿಷ್ಯರು ಅಗೋಚರವೂ, ಅತೀಂದ್ರಿಯವೂ ಪರವಿದ್ಯೆಯ ವಿಷಯವಾದ ಪ್ರತ್ಯಕ್ಷ ಪರಬ್ರಹ್ಮನ ಕುರಿತು ತಿಳಿಯಲು ಅಪೇಕ್ಷಿಸಿದರು.

ಸೌರ್ಯಾಯಣಿ ಗಾರ್ಗ್ಯನು ತನ್ನ ಮುಂದಿನ ಪ್ರಶ್ನೆಯನ್ನು ಹಾಕಿದನು. ಇದು ನಾಲ್ಕನೆ ಪ್ರಶ್ನೆ: "ಹೇ ಭಗವನ್, ಪುರುಷರಲ್ಲಿ ಯಾರು ಎಚ್ಚೆತ್ತಿದ್ದಾರೆ? ಯಾರು ನಿದ್ರಿಸುತ್ತಿದ್ದಾರೆ? ಯಾರು ಸ್ವಪ್ನಗಳನ್ನು ನೋಡುವವನು? ಯಾರಿಗೆ ಈ ಸುಖವುಂಟಾಗುವುದು? ಯಾರಲ್ಲಿ ಎಲ್ಲವೂ ಏಕೀಭೂತವಾಗಿರುವುದು?" ಇದು ಒಂದು ಕುತೂಹಲಕರವಾದ ಪ್ರಶ್ನೆ. ಈ ಪ್ರಶ್ನೆ ನಮಗೆ ಸಾಧಾರಣವಾಗಿ ಹೊಳೆಯುವುದೇ ಇಲ್ಲ. ಈ ಪ್ರಶ್ನೆಯನ್ನು ಅರ್ಥಮಾಡಿಕೊಳ್ಳಲು ಸ್ವಲ್ಪ ವಿವರಣೆ ಬೇಕು. ಒಬ್ಬ ವ್ಯಕ್ತಿ ಅಥವಾ ಪುರುಷ ಎಂದಾಗ ಅವನಲ್ಲಿ ಹಲವಾರು ಆಯಾಮ

ಗಳಿವೆ. ಅವನ್ನು ಇಲ್ಲಿ ಶಿಷ್ಯನು ವಿಭಜನೆ ಮಾಡಿ ಅರ್ಥಮಾಡಿ ಕೊಂಡಿದ್ದಾನೆ.

ವ್ಯಕ್ತಿ ಅಥವಾ ಪುರುಷ ಎಂದರೆ ಆತ್ಮ, ಮನಸ್ಸು, ಬುದ್ಧಿ, ಇಂದ್ರಿಯ, ದೇಹ ಇವುಗಳೆಲ್ಲದರ ಸಮೂಹ. ಈ ವ್ಯಕ್ತಿ ಜಾಗ್ರದವಸ್ಥೆಯಲ್ಲಿ ವ್ಯವಹರಿಸುತ್ತಾನೆ. ಜಾಗ್ರದವಸ್ಥೆಯಲ್ಲಿದ್ದು ನೋಡುವವನಿಗೆ ಮಲಗಿರುವ ವ್ಯಕ್ತಿಯು, ಮಲಗಿ ಕನಸು ಕಾಣುತ್ತಿದ್ದು, ಸುಮ್ಮನೆ ಬಿದ್ದಿರುವವನಂತೆ ಕಾಣುವುದು. ಮನಸ್ಸು ಇಂದ್ರಿಯಗಳೆಲ್ಲ ತಾತ್ಕಾಲಿಕವಾಗಿ ಅವನ ದೇಹವನ್ನು ಬಿಟ್ಟಿರುವಂತೆ ಕಾಣುವುದು. ಆದರೆ ಮಲಗಿರುವವನು ತನ್ನ ಮನಸ್ಸಿನಲ್ಲಿ ದೊಡ್ಡ ಪ್ರಪಂಚವನ್ನೇ ನೋಡುತ್ತಿರುವನು. 'ಇದು ಸ್ವಪ್ನ' ಎಂದು ಆಗ ಅವನಿಗೆ ಗೊತ್ತಾಗುವುದೇ ಇಲ್ಲ. ಎದ್ದಮೇಲೆ ಅದು ಸ್ವಪ್ನವೆನ್ನುತ್ತಾನೆ. ಆಗ ಯಾರು ಸ್ವಪ್ನವನ್ನು ನೋಡುತ್ತಿದ್ದರು? ಇದು ಗಾರ್ಗ್ಯನ ಪ್ರಶ್ನೆ. ಮತ್ತೆ ಕೇಳುತ್ತಾನೆ "ಯಾರಿಗೆ ಸುಖವುಂಟಾಗುವುದು?" "ಸುಷುಪ್ತಿಯಲ್ಲಿ ಆಗುವ ಸುಖದ ಅನುಭವ ಯಾರಿಗಾಗುವುದು?" ಅವನದೇ ಮುಂದಿನ ಪ್ರಶ್ನೆ, ಯಾರಲ್ಲಿ ಇವುಗಳೆಲ್ಲಾ ಒಂದಾಗುತ್ತವೆ? ಅಂದರೆ ಜಾಗ್ರದವಸ್ಥೆ, ಸ್ವಪ್ನಾವಸ್ಥೆ ಮತ್ತು ಸುಷುಪ್ತಿಯ ಅವಸ್ಥೆ, ಇವುಗಳೆಲ್ಲ ಒಬ್ಬನೇ ವ್ಯಕ್ತಿಯ ಭಿನ್ನ ಭಿನ್ನ ಅವಸ್ಥೆಗಳಾದ್ದರಿಂದ ಕಡೆಗೆ ಅವನಲ್ಲಿಯೇ ಸಂಗಮವಾಗುವುವು. ಅಲ್ಲಿ ಅವು ತಮ್ಮ ಪ್ರತ್ಯೇಕತೆಯನ್ನು ಕಳೆದುಕೊಳ್ಳುವುವು. ನದಿಗಳೆಲ್ಲ ಸಾಗರಕ್ಕೆ ಸೇರಿ ಅದರಲ್ಲಿ ಒಂದಾಗುವುವು. ಅದರಂತೆಯೇ ಇವುಗಳೆಲ್ಲ ಎಲ್ಲಿ ಒಂದಾಗುವುವೋ ಅದನ್ನು ತಿಳಿಯಲು ಇಚ್ಛಿಸಿದನು.

ಪಿಪ್ಪಲಾದನು ಇವೆಲ್ಲ ಪ್ರಶ್ನೆಗಳನ್ನು ನಿರೀಕ್ಷಿಸಿದ್ದನು. ಇವನ ಕುತೂಹಲವನ್ನು ಮೆಚ್ಚಿ ವಿವರವಾಗಿ ಉತ್ತರವನ್ನು ಕೊಟ್ಟನು. ಜಾಗೃದವಸ್ಥೆಯಲ್ಲಿ ನಾವು ಜಾಗೃದವಸ್ಥೆಯೇ ಸತ್ಯವೆಂದು ನಂಬಿರುತ್ತೇವೆ, ಸ್ವಪ್ನಾವಸ್ಥೆಯಲ್ಲಿ ಸ್ವಪ್ನವೇ ಸತ್ಯವೆಂದು ಕಾಣುತ್ತೇವೆ, ಸುಷುಪ್ತ್ಯವಸ್ಥೆಯಲ್ಲಿ ಮತ್ತಾವುದೂ ಗೋಚರಕ್ಕೆ ಬರುವುದಿಲ್ಲ. ಈ ಮೂರು ಅವಸ್ಥೆಗಳನ್ನು ಮೀರಿ ಹೋಗಿದ್ದೇ ಆದರೆ ಇವುಗಳ ಆಧಾರವಾದ ಆತ್ಮವೊಂದೇ ಸತ್ಯವೆಂದು ಮನಗಾಣಬಹುದು. ಜಾಗೃದವಸ್ಥೆ ಹೋದರೂ, ಸ್ವಪ್ನಾವಸ್ಥೆ ಹೋದರೂ, ಸುಷುಪ್ತ್ಯವಸ್ಥೆ ಹೋದರೂ ಆತ್ಮವೊಂದೇ ಉಳಿಯುತ್ತದೆ. ಈ ಎಲ್ಲ ಅವಸ್ಥೆಗಳೂ ನಮಗೆ ಮುಖ್ಯವೇ. ಹೇಗೆ ಇಡೀ ಪ್ರಪಂಚವು ಕೇವಲ ಮನಸ್ಸಿನಿಂದ ಉತ್ಪತ್ತಿಯಾಗಿ ಮತ್ತೆ ಮನಸ್ಸಿನಲ್ಲೇ ಲೀನವಾಗುತ್ತದೆ ಎಂದು ಸ್ವಪ್ನಾವಸ್ಥೆಯು ತೋರಿಸುತ್ತದೆ. ಸುಷುಪ್ತಿ ಎಂದರೆ ಒಂದು ವಿಧದಲ್ಲಿ ಆತ್ಮವು ಸ್ವಗೃಹಕ್ಕೆ ವಾಪಸ್ಸು ಬಂದ ಹಾಗೆ. ಗಾಢ ನಿದ್ರೆಯಲ್ಲಿರುವ ವ್ಯಕ್ತಿಗೆ ಅಂಥ ಅವಸ್ಥೆಯಲ್ಲಿ ಏನೂ ಅರಿವಾಗದಿದ್ದರೂ ಅದರಿಂದ ಅವನು ಎಚ್ಚರಗೊಂಡಾಗ "ನನಗೆ ಏನೂ ಅರಿವಿರಲಿಲ್ಲ. ನಾನು ಚೆನ್ನಾಗಿ ನಿದ್ರಿಸಿದೆ" ಎಂಬ ಭಾವನೆಯೊಂದಿಗೆ ಎಚ್ಚರಗೊಳ್ಳುತ್ತಾನೆ. ಜಾಗೃದವಸ್ಥೆಯಲ್ಲಿಯೇ ವ್ಯಕ್ತಿಗೆ 'ನಾನು' ಎಂಬುದು ಏನು ಎಂದು ತಿಳಿಯುತ್ತದೆ. 'ನಾನು'ವಿನ ಅರಿವೇ ಜೀವನದಲ್ಲಿ ಕಟ್ಟಕಡೆಯದಾಗಿ ಉಳಿಯುವುದು. ಅದರ ಮೇಲೇ ಉಳಿದೆಲ್ಲ ಅವಸ್ಥೆಗಳೂ ಅವಲಂಬಿಸಿವೆ. ಅದು ಇತರ ವಸ್ತುಗಳು ಅರಿವಿಗೆ ಬರುವಂತೆ ಮಾಡುವ ಪ್ರಜ್ವಲಿಸುವ ಸೂರ್ಯನ ಹಾಗೆ. ಪ್ರಪಂಚದಲ್ಲಿ ಯಾವ ವಸ್ತುಗಳಿದ್ದರೂ, ಇಲ್ಲದಿದ್ದರೂ ಸೂರ್ಯನು ಮಾತ್ರ ಪ್ರಜ್ವಲಿಸುತ್ತಲೇ ಇರುತ್ತಾನೆ. ಆತ್ಮದ ವಿಷಯವೂ ಹಾಗೆ. ಅವಸ್ಥೆಗಳು ಬರಲಿ, ಹೋಗಲಿ, ಆತ್ಮವು ಮಾತ್ರ ಅಚಲವಾಗಿಯೇ ಇರುತ್ತದೆ. ಮೂರು ಅವಸ್ಥೆಗಳನ್ನು ಮೀರಿದ್ದು ನಾಲ್ಕನೆಯ ತುರೀಯಾವಸ್ಥೆ. ಅದು ಅನುಭವಾತೀತ. ಅದೇ ಅಕ್ಷರಪುರುಷನೂ, ಪರಬ್ರಹ್ಮನೂ, ನಿತ್ಯವೂ, ದ್ರಷ್ಟಾರನೂ, ಕರ್ತೃವೂ ಆದ ಆತ್ಮ. ಗಾರ್ಗ್ಯನಿಗೆ ಇದನ್ನು ಕೇಳುತ್ತಿದ್ದಂತೆ ಹೃದಯವೆಲ್ಲ ಆನಂದದಿಂದ ತುಂಬಿ ಜ್ಞಾನಭಂಡಾರವನ್ನೇ ಸೂರೆಗೈದಷ್ಟು ಆನಂದವಾಯಿತು.

ಅನಂತರ ಶೈಬ್ಯನೂ ತನ್ನ ಪ್ರಶ್ನೆಯನ್ನು ಗುರುವಿನ ಮುಂದಿಟ್ಟನು. "ಭಗವನ್, ಮನುಷ್ಯರಲ್ಲಿ ಯಾರು ಸಾಯುವವರೆಗೂ ಓಂಕಾರವನ್ನು ಉಪಾಸನೆ ಮಾಡುವನೋ ಅವನು ಯಾವ ಲೋಕವನ್ನು ಜಯಿಸುತ್ತಾನೆ?" ಇದು ಸ್ವಾರಸ್ಯಕರವಾದ ಪ್ರಶ್ನೆ. ಇದು ಓಂಕಾರದ ಉಪಾಸನೆಗೆ ಸಂಬಂಧಿಸಿದ ಪ್ರಶ್ನೆ. ಪಿಪ್ಪಲಾದನು ಶೈಬ್ಯನ ಪ್ರಶ್ನೆಯಿಂದ ಸಂತೋಷಗೊಂಡು ಹೀಗೆ ಉತ್ತರಿಸಿದನು: "ಸತ್ಯಕಾಮ, ಓಂಕಾರವೇ ಪರಬ್ರಹ್ಮವೂ, ಅಪರಬ್ರಹ್ಮವೂ ಆಗಿದೆ. ಆದುದರಿಂದ ತಿಳಿದವನು ಈ ಅವಲಂಬನದಿಂದಲೇ ಇವೆರಡರಲ್ಲಿ ಒಂದನ್ನು ಅನುಸರಿಸುತ್ತಾನೆ." ಪಿಪ್ಪಲಾದನು ಸತ್ಯಕಾಮನಿಗೆ ಹೇಳಿದುದನ್ನು ನಾವು ಸ್ವಲ್ಪ ಚಿಂತಿಸಬೇಕು. ಓಂ ಎಂಬ ಒಂದೇ ಮಂತ್ರ ಸಾಕಾರ ಹಾಗೂ ನಿರಾಕಾರದ ಚಿಹ್ನೆಯಾಗಿದೆ. ಬ್ರಹ್ಮವು ನಾಮ, ರೂಪ ಮತ್ತು ಗುಣಗಳಿಗೆ ಅತೀತವಾದರೂ, ಚಿಂತಿಸಬೇಕಾದರೆ ಅದಕ್ಕೆ ಏನಾದರೂ ಗುಣವನ್ನು ಆರೋಪ ಮಾಡಿ, ಯಾವುದಾದರೂ ಚಿಹ್ನೆಯ ಸಹಾಯವನ್ನು ತೆಗೆದುಕೊಳ್ಳಬೇಕಾಗಿದೆ. ಬಳ್ಳಿ ಹಬ್ಬಿಕೊಂಡು ಹೋಗಬೇಕಾದರೆ ಅದಕ್ಕೆ ಏನಾದರೂ ಒಂದು ಆಧಾರ ಬೇಕು. ಹಾಗೆಯೇ ಚಿಂತನೆಯ ಬಳ್ಳಿಗೂ ಒಂದು ಆಧಾರ ಬೇಕು. ಆ ಆಧಾರವೇ ಓಂಕಾರ. ಓಂಕಾರಕ್ಕೆ ಯಾವ ಆಕಾರವೂ ಇಲ್ಲ. ಆದರೆ ಅದು ಎಲ್ಲ ಆಕಾರಗಳ ಉಗಮ ಸ್ಥಾನವಾಗಿದೆ. ಶ್ರೀರಾಮಕೃಷ್ಣರು ಇದನ್ನು ಒಂದು ಉದಾಹರಣೆಯ ಮೂಲಕ ವಿವರಿಸುತ್ತಿದ್ದರು.

ಒಬ್ಬ ಬಣ್ಣ ಹಾಕುವವನಿದ್ದ. ಅವನು ಬಣ್ಣವನ್ನು ಒಂದು

ಬಕೆಟ್ಟಿನಲ್ಲಿ ಬೆರೆಸಿಟ್ಟಿದ್ದ. ಯಾರು ಯಾವ ಬಣ್ಣವನ್ನು ಕೇಳಲಿ ಅದನ್ನು ಒಂದೇ ಬಕೆಟ್ಟಿನಲ್ಲಿ ಅದ್ದಿ, "ತೆಗೆದುಕೊಳ್ಳಿ ನಿಮ್ಮ ಹಳದಿ", "ತೆಗೆದುಕೊಳ್ಳಿ ನಿಮ್ಮ ಕೆಂಪು" ಎಂದು ಹೇಳಿ ಅವರಿಗೆ ಬೇಕಾದ ಬಣ್ಣ ಕೊಡುತ್ತಿದ್ದ. ದೂರದಲ್ಲಿ ನಿಂತು ನೋಡುತ್ತಿದ್ದ ಒಬ್ಬ ವ್ಯಕ್ತಿ "ಒಂದೇ ಬಕೆಟ್ಟಿನಿಂದ ಇಷ್ಟೊಂದು ಬಣ್ಣಗಳನ್ನು ತೆಗೆಯುತ್ತಾನಲ್ಲ" ಎಂದು ಆಶ್ಚರ್ಯಪಟ್ಟ. ತಾನೂ ಕೂಡ ಒಂದು ಬಟ್ಟೆ ಕೊಟ್ಟ. ಬಣ್ಣ ಹಾಕುವವನು "ನಿನಗೆ ಯಾವ ಬಣ್ಣ ಬೇಕು?" ಎಂದು ಕೇಳಿದ. ಅದಕ್ಕೆ ಅವನು, "ಆ ಬಕೆಟ್ಟಿನಲ್ಲಿ ಯಾವ ಬಣ್ಣ ಇದೆಯೋ ಅದನ್ನು ಹಾಕು" ಎಂದ. ಬಣ್ಣ ಹಾಕುವವನು, "ಅದರಲ್ಲಿ ಯಾವ ಬಣ್ಣವೂ ಇಲ್ಲ, ಅದರೆ ಎಲ್ಲಾ ಬಣ್ಣವೂ ಇದೆ" ಎಂದ. ಓಂಕಾರವೂ ಹಾಗೆ. ಅಲ್ಲಿ ಎಲ್ಲಾ ಆಕಾರಗಳೂ ಇವೆ. ಅದರ ಜೊತೆಗೆ ನಿರಾಕಾರವೂ ಇದೆ. ಪಿಪ್ಪಲಾದನು ಹೇಳಿದ, "ಅಕಾರ, ಉಕಾರ, ಮಕಾರ ಗಳಿಂದ ಸೇರಿರುವ ಓಂಕಾರದಲ್ಲಿ ಅಕಾರವು ಇಹ ಜೀವನ ದಲ್ಲಿರುವ ಎಲ್ಲ ಭೋಗವಸ್ತುಗಳನ್ನು, ಉಕಾರ ಮತ್ತು ಮಕಾರಗಳು ಪರಲೋಕದಲ್ಲಿ ದೊರೆಯುವ ಸುಖಗಳನ್ನೂ ಮತ್ತು ಈ ಮೂರು ಅಕ್ಷರಗಳೂ ಸೇರಿ ಬ್ರಹ್ಮಲೋಕವನ್ನೂ ಕೊಡುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ ಓಂಕಾರವನ್ನು ಸರಿಯಾಗಿ ಉಪಾಸಿಸುವವನು ಅಪರಬ್ರಹ್ಮ ಮತ್ತು ಪರಬ್ರಹ್ಮ ಎರಡನ್ನೂ ಪಡೆಯಬಹುದು."

ಈಗ ಕೊನೆಯಲ್ಲಿ ಭಾರದ್ವಾಜ ಸುಕೇಶನಿಗೆ ತನ್ನ ಪ್ರಶ್ನೆ ಯನ್ನು ಮುಂದಿಡುವ ಅವಕಾಶ ಸಿಕ್ಕಿತು. ಅವನು ಪಿಪ್ಪಲಾದ ನನ್ನು ಪ್ರಶ್ನಿಸಿದನು, 'ಭಗವನ್, ಕೋಸಲ ದೇಶದ ರಾಜಪುತ್ರ ನಾದ ಹಿರಣ್ಯನಾಭನು ನನ್ನ ಬಳಿಗೆ ಬಂದು ಈ ಪ್ರಶ್ನೆಯನ್ನು ಕೇಳಿದನು: 'ಭಾರದ್ವಾಜ, ಹದಿನಾರು ಕಲೆಗಳುಳ್ಳ ಪುರುಷನನ್ನು ನೀನು ತಿಳಿದಿರುವೆಯಾ?' ನಾನು ಆತನಿಗೆ ಹೇಳಿದೆ, 'ಇಲ್ಲ, ನಾನು ಅವನನ್ನು ತಿಳಿದಿಲ್ಲ.' ಅದನ್ನು ಕೇಳಿ ಅವನು ಮಾತನಾಡದೆ ರಥವನ್ನು ಏರಿ ಹೊರಟುಹೋದನು. ಈಗ ನಾನು ಆ ಪ್ರಶ್ನೆಯನ್ನು ನಿಮ್ಮಲ್ಲಿ ಕೇಳುತ್ತಿದ್ದೇನೆ, ಆ ಪುರುಷ ಎಲ್ಲಿರುವನು?"

ಪಿಪ್ಪಲಾದನು ಅವನ ಪ್ರಶ್ನೆಗೆ ಹೀಗೆ ಉತ್ತರಿಸಿದ: "ಆ ಪುರುಷನು ಹೃದಯದಲ್ಲಿಯೇ ಇರುವನು. ಪ್ರಾಣ, ಶ್ರದ್ಧೆ, ಆಕಾಶ, ವಾಯು, ಜ್ಯೋತಿ, ನೀರು, ಪೃಥ್ವಿ, ಇಂದ್ರಿಯ, ಮನಸ್ಸು, ಅನ್ನ, ವೀರ್ಯ, ತಪಸ್ಸು, ಮಂತ್ರಗಳು, ಕರ್ಮ, ಲೋಕಗಳು ಮತ್ತು ನಾಮ ಇವೇ ಪುರುಷನ ಹದಿನಾರು ಕಲೆಗಳು. ನದಿಗಳು ಸಮುದ್ರವನ್ನು ಸೇರಿದ ಮೇಲೆ ತಮ್ಮ ನಾಮರೂಪಗಳನ್ನು ಕಳೆದುಕೊಂಡು ಒಟ್ಟು ಸಮುದ್ರವೆಂದು ಕರೆಸಿಕೊಳ್ಳುವಂತೆ ಈ ಕಲೆಗಳು ಪುರುಷನನ್ನು ಹೊಂದಿದ ಮೇಲೆ ನಾಮರೂಪಗಳನ್ನು ಬಿಡುವುವು. ಆಗ ಸಕಲನಾದ ಪುರುಷನು, ನಿಷ್ಕಲನೂ, ಅಮೃತನೂ ಆಗುವನು. ಇವನೇ ಪರಬ್ರಹ್ಮ ಅಥವಾ ಪರಮಪುರುಷ."

ಈ ಉತ್ತರಗಳನ್ನು ಪಡೆದ ಶಿಷ್ಯರು ಗುರುವಿಗೆ ಕೃತಜ್ಞತೆ ಅರ್ಪಿಸಿದರು. ಅಜ್ಞಾನದಿಂದ ಜ್ಞಾನದತ್ತ ಕರೆದೊಯ್ಯುವವನು ಗುರು. ಅವನನ್ನು ತಂದೆ ಎಂದು ಸಂಬೋಧಿಸಿ ನಮಸ್ಕರಿಸಿ ದರು. 'ನಿನ್ನಂತಹ ಪರಮ ಋಷಿಗೆ ಮತ್ತೆ ಮತ್ತೆ ನಮಸ್ಕಾರ" ಎಂದು ಹೇಳಿ ಅವನಿಂದ ಬೀಳ್ಕೊಂಡು ತಮ್ಮ ತಮ್ಮ ಮನೆಗಳಿಗೆ ಹಿಂತಿರುಗಿದರು.

✪


## ಆಧ್ಯಾತ್ಮಿಕ ಶಿಬಿರ (ಪುರುಷರಿಗಾಗಿ ಆವಾಸಿ ಕ್ಯಾಂಪ್)

***2006ನೇ ಡಿಸೆಂಬರ್ 21ರಿಂದ ಡಿಸೆಂಬರ್ 25ರವರೆಗೆ***

**ಶಿಬಿರದ ತರಗತಿಗಳನ್ನು ನಡೆಸಲಾಗುವ ಮಾಧ್ಯಮ : ಕನ್ನಡ ಮತ್ತು ಇಂಗ್ಲಿಷ್. ಐದು ದಿನಗಳ ಶಿಬಿರಕ್ಕಾಗಿ ತಗಲುವ ಊಟ, ವಸತಿಯ ಖರ್ಚು : ರೂ. 725/- ಮಾತ್ರ.** ಶಿಬಿರದ ವಿವರಗಳನ್ನೊಳಗೊಂಡ ಪ್ರಾಸ್ಪೆಕ್ಟಸ್ ಮತ್ತು ಅರ್ಜಿಫಾರಂಗಾಗಿ ನಿಮ್ಮ ಸ್ವವಿಳಾಸವಿರುವ (10 cm x 23 cm) ಕವರಿಗೆ ರೂ.5ರ ಪೋಸ್ಟಲ್ ಸ್ಟ್ಯಾಂಪ್ ಲಗತ್ತಿಸಿ ಕರೆಸ್ಪಾಂಡೆಂಟ್‌ರನ್ನು ಹೆಸರಿಸಿ, ಕೆಳಗಿನ ವಿಳಾಸಕ್ಕೆ ಬರೆಯಿರಿ.

**ತುಂಬಿಸಿದ ಅರ್ಜಿ ಫಾರಂಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 16-12-2006**

**Ramakrishna Institute of Moral and Spiritual Education,** Yadavagiri, Mysore 570 020
Phone:0821-2417666, 2411140; FAX: 0821-2412800; e-mail: rimse@eth.net; mysore.rimse@gmail.com



**ವಿಶೇಷ ಉಡುಗೊರೆ ! ಆಕರ್ಷಕ ಡೈರಿ! :**

**ವಿವೇಕಪ್ರಭಕ್ಕೆ ಐದು ಜನ ಚಂದಾದಾರರನ್ನು ಮಾಡಿಸಿ ವಿಶೇಷ ವಿವೇಕಪ್ರಭ ದಿನಚರಿ 2007 ಅನ್ನು ಪಡೆಯಿರಿ**

**(ಇದಕ್ಕಾಗಿ 42ನೆ ಪುಟದಲ್ಲಿರುವ ಚಂದಾ ಅರ್ಜಿಗಳನ್ನು ಉಪಯೋಗಿಸಿ)**